ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 1, March-April 2026, Pp. 13-17
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಪ್ರಾಚೀನ ಭಾರತದಲ್ಲಿ ಮಹಿಳೆಯರ ಸ್ಥಾನಮಾನ

**ಡಾ. ಟಿ. ಎಲ್. ಜಗದೀಶ**
ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಮಹಿಳಾ ಕಾಲೇಜು, ಹುಣಸೂರು

***Abstract:***
*ಈ ಸಂಶೋಧನಾ ಲೇಖನವು ಪ್ರಾಚೀನ ಭಾರತದಲ್ಲಿ ಮಹಿಳೆಯರ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಮತ್ತು ಆರ್ಥಿಕ ಸ್ಥಾನಮಾನವನ್ನು ಸಮಗ್ರವಾಗಿ ಅಧ್ಯಯನ ಮಾಡುತ್ತದೆ. ವೇದಕಾಲದಿಂದ ಆರಂಭಿಸಿ ವಿವಿಧ ಐತಿಹಾಸಿಕ ಹಂತಗಳಲ್ಲಿ ಮಹಿಳೆಯರಿಗೆ ದೊರೆತ ಹಕ್ಕುಗಳು, ಸ್ವಾತಂತ್ರ್ಯ ಮತ್ತು ಸಾಮಾಜಿಕ ಅವಕಾಶಗಳನ್ನು ವಿಶ್ಲೇಷಿಸಲಾಗಿದೆ. ಶಿಕ್ಷಣ, ವಿವಾಹ, ಕುಟುಂಬ ವ್ಯವಸ್ಥೆ, ಧಾರ್ಮಿಕ ಆಚರಣೆಗಳು ಹಾಗೂ ಆಡಳಿತದಲ್ಲಿ ಮಹಿಳೆಯರ ಪಾತ್ರವನ್ನು ಇಲ್ಲಿ ಪರಿಶೀಲಿಸಲಾಗಿದೆ. ಕಾಲಕ್ರಮೇಣ ಮಹಿಳೆಯರ ಸ್ಥಾನಮಾನದಲ್ಲಿ ಉಂಟಾದ ಬದಲಾವಣೆಗಳು ಮತ್ತು ಅವುಗಳಿಗೆ ಕಾರಣವಾದ ಸಾಮಾಜಿಕ ಹಾಗೂ ಧಾರ್ಮಿಕ ಅಂಶಗಳನ್ನು ಚರ್ಚಿಸಲಾಗಿದೆ. ಒಟ್ಟಾರೆಯಾಗಿ, ಪ್ರಾಚೀನ ಭಾರತೀಯ ಸಮಾಜದಲ್ಲಿ ಮಹಿಳೆಯರ ಸ್ಥಾನವು ಏಕರೂಪವಾಗಿರದೆ ಕಾಲ, ಪ್ರದೇಶ ಮತ್ತು ಸಾಮಾಜಿಕ ವರ್ಗಗಳಿಗೆ ಅನುಗುಣವಾಗಿ ಬದಲಾಗುತ್ತಿತ್ತು ಎಂಬುದನ್ನು ಅಧ್ಯಯನವು ಪ್ರತಿಪಾದಿಸುತ್ತದೆ.*

**Keywords:** *ಪ್ರಾಚೀನ ಭಾರತ, ಮಹಿಳೆಯರ ಸ್ಥಾನಮಾನ, ಮಹಿಳಾ ಶಿಕ್ಷಣ, ಸಾಮಾಜಿಕ ಹಕ್ಕುಗಳು,ವೇದಕಾಲದ ಮಹಿಳೆಯರು*

## ಪೀಠಿಕೆ

ಭಾರತೀಯ ವೇದ ಪರಂಪರೆಯಲ್ಲಿ ಮಹಿಳೆಗೆ ವಿಶಿಷ್ಟ ಸ್ಥಾನಮಾನವಿತ್ತು. ಆ ಕಾಲಘಟ್ಟದಲ್ಲಿ ಮಹಿಳೆಯರನ್ನು ಪೂಜ್ಯಭಾವನೆಯಿಂದ ಕಾಣಲಾಗುತ್ತಿತ್ತು. ಈ ಕಾರಣದಿಂದಾಗಿಯೇ 'ಮಾತೃದೇವೋಭವ' ಎಂಬ ಅಭಿದಾನದಿಂದ ನಮ್ಮ ದೇಶವನ್ನು ಸಂಬೋಧಿಸುವುದಿದೆ. ಮಹಿಳೆಯರಿಗೆ ವೇದಗಳ ಕಾಲದಲ್ಲಿಯೇ ಉನ್ನತ ಸ್ಥಾನಮಾನವಿದ್ದು, ಅವಳು ವೇದಗಳನ್ನು ರಚಿಸುವಷ್ಟು ಸಮರ್ಥಶಾಲಿಯಾಗಿದ್ದಳು. ಅಲ್ಲದೆ ಚರ್ಚೆಗಳಲ್ಲಿ ಭಾಗವಹಿಸುವ, ಪರಾಮರ್ಶಿಸುವ ಹಾಗೂ ಮಂತ್ರಗಳ ರಚನೆಯಲ್ಲಿಯೂ ತನ್ನದೇ ಆದ ಪ್ರಾವೀಣ್ಯತೆಯನ್ನು ಪ್ರದರ್ಶಿಸಿದ ನಿದರ್ಶನಗಳು ಪ್ರಾಚೀನ ಗ್ರಂಥಗಳಲ್ಲಿ ಉಲ್ಲೇಖಗೊಂಡಿವೆ. ಇತರ ದೇಶಗಳಿಗೆ ಹೋಲಿಸಿದರೆ ಭಾರತ ದೇಶದಲ್ಲಿ ಮಹಿಳೆಯರನ್ನು ದೇವತೆಯೆಂದೇ ಕಾಣುವುದಿದೆ. ಆದರೆ ಫ್ರಾನ್ಸ್ ದೇಶದಲ್ಲಿ ಹೆಣ್ಣನ್ನು 'ಪ್ರೇಯಸಿ', ಅಮೇರಿಕಾದಲ್ಲಿ 'ಮನೆಯೊಡತಿ' ಎಂದು ಕರೆದರೆ, ಈ ಸೀಮಿತಾರ್ಥಕ್ಕಿಂತ ಭಿನ್ನವಾದ ಅರ್ಥವಿದ್ದು; ಭಾರತ ದೇಶದಲ್ಲಿ ಆಕೆಯನ್ನು ದೇವತೆ, ಕರುಣಾಮಯಿ, ಸಹನಾಮೂರ್ತಿ ಎಂದೆಲ್ಲಾ ಗುಣಗಾನ ಮಾಡುವುದನ್ನು ಕಾಣಬಹುದು. ಅಂತಹ ದಿವ್ಯಮೂರ್ತಿಯಾದ ಮಹಿಳೆಯನ್ನು ಕುರಿತು ಪ್ರಸ್ತುತ

***Please cite this article as:*** ಜಗದೀಶ, ಟಿ.ಎಲ್. (2026). ಪ್ರಾಚೀನ ಭಾರತದಲ್ಲಿ ಮಹಿಳೆಯರ ಸ್ಥಾನಮಾನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(1), 13–17

ದಿನಮಾನಗಳಲ್ಲಿ ವಿವಿಧ ಆಯಾಮಗಳಲ್ಲಿ ಅಧ್ಯಯನ ನಡೆಯುತ್ತಿರುವುದು ಸರ್ವರ ಗಮನವನ್ನು ಸೆಳೆದಿದೆ. ಅದರಲ್ಲೂ ವೇದಗಳ ಕಾಲದಲ್ಲಿ ಮಹಿಳೆಗೆ ವಿಶೇಷ ಸ್ಥಾನಮಾನವನ್ನು ನೀಡಲಾಗಿತ್ತು. ಮನು ಎನ್ನುವ ದಾರ್ಶನಿಕನು ಹೇಳುವಂತೆ 'ಹೆಣ್ಣನ್ನು ಎಲ್ಲಿ ಗೌರವಿಸುತ್ತಾರೋ ಅಲ್ಲಿ ದೇವತೆಗಳು ಸಂತೋಷದಿಂದ ಇರುತ್ತಾರೆ' ಎಂಬ ಮಾತು ಭಾರತದಲ್ಲಿ ಸ್ತ್ರೀಯರಿಗೆ ಇದ್ದ ಗೌರವವನ್ನು ಸ್ಪಷ್ಟಪಡಿಸುತ್ತದೆ.'

ಸ್ತ್ರೀಯರ ಸ್ಥಾನಮಾನ ಕುರಿತಂತೆ ಪ್ರಾಚೀನ ಭಾರತವನ್ನು ಅವಲೋಕಿಸಿದರೆ, ಸ್ಪಷ್ಟ ಮಾಹಿತಿ ದೊರಕುತ್ತದೆ. ಅದರಲ್ಲೂ ವೇದೋಪನಿಷತ್ತುಗಳನ್ನು ಅಭ್ಯಸಿಸಿದಾಗ ಋಗ್ವೇದದಲ್ಲಿ ಸ್ತ್ರೀಯರ ಸ್ಥಾನಮಾನಗಳನ್ನು ಕುರಿತು ಅವಲೋಕಿಸಬಹುದಾಗಿದೆ. ವೇದಕಾಲದ ಆರಂಭದ ದಿನಗಳಲ್ಲಿ ಎಲ್ಲ ರಂಗಗಳಲ್ಲಿಯೂ ಹಿಂದೂ ಸ್ತ್ರೀಯರಿಗೆ ಪುರುಷನಷ್ಟೇ ಸರಿ ಸಮಾನವಾದ ಸ್ಥಾನಮಾನಗಳಿದ್ದವು. ಆ ದಿನಗಳಲ್ಲಿ ಪುತ್ರ ಸಂತಾನಕ್ಕಾಗಿ ತಂದೆ ತಾಯಿಯರು ದೇವರನ್ನು ಪೂಜಿಸುತ್ತಿದ್ದರು. ಆದರೆ ಸಹಜವಾಗಿ ಹೆಣ್ಣು ಮಗುವಿನ ಜನನವಾದರೆ ಅದನ್ನು ಅಮಂಗಳವೆಂದು ಭಾವಿಸುತ್ತಿರಲಿಲ್ಲ ಎಂಬುದು ಋಗ್ವೇದದಿಂದ ತಿಳಿದು ಬರುತ್ತದೆ.

ಮಹಿಳೆಯು ಈ ಕಾಲದಲ್ಲಿ ಪುರುಷನಷ್ಟೆ ಹಕ್ಕನ್ನು ಹೊಂದಿದ್ದು, ಗುರುಕುಲದಲ್ಲಿ ಅವನಿಗೆ ಸರಿಸಮಾನವಾದ ಶಿಕ್ಷಣವನ್ನು ಪಡೆಯಬಹುದಿತ್ತು. ಇದಕ್ಕೆ ನಿದರ್ಶನವೆಂಬಂತೆ ಕ್ರಿ.ಪೂ.150ರಲ್ಲಿದ್ದ ಪತಂಜಲಿಯಿಂದಾಗಿ 'ವೇದಶಾಲೆ' ಅಥವಾ 'ಚರಮ'ಗಳಲ್ಲಿ ಸ್ತ್ರೀಯರು ಶಿಕ್ಷಣಾರ್ಥಿಗಳಾಗಿ ಸೇರುತ್ತಿದ್ದರು ಎಂಬುದಾಗಿ ತಿಳಿದುಬರುತ್ತದೆ. ಅಂದು ಆಚರಿಸಲಾಗುತ್ತಿದ್ದ ಹಬ್ಬ ಹರಿದಿನಗಳಲ್ಲಿ ಸ್ತ್ರೀಯರು ಮತ್ತು ಪುರುಷರು ಇಬ್ಬರೂ ಭಾಗವಹಿಸುತ್ತಿದ್ದುದು ರೂಢಿಯಲ್ಲಿತ್ತು. ಈ ಸಂದರ್ಭದಲ್ಲಿ ಅಲ್ಲಿ ಹಲವು ಸ್ಪರ್ಧೆಗಳನ್ನು ಏರ್ಪಡಿಸುತ್ತಿದ್ದರು. ಆ ಪಂದ್ಯಗಳಲ್ಲಿ ಸ್ತ್ರೀ–ಪುರುಷರೆಂಬ ಭೇದವಿಲ್ಲದೆ ಸಮಾನವಾಗಿ ಸ್ಪರ್ಧಿಸುತ್ತಿದ್ದರು. ಮಾತ್ರವಲ್ಲ ಅವರಿಬ್ಬರು ಸ್ಪಂದಿಸಲು ಸಹ ಒಳ್ಳೆಯ ವಾತಾವರಣವನ್ನು ಕಲ್ಪಿಸುವಂತಿತ್ತು. ಸ್ತ್ರೀಯರು ಸಿಂಗರಿಸಿಕೊಂಡು ಪುರುಷರ ಮನಸ್ಸನ್ನು ಆಕರ್ಷಿಸುವ ಸಲುವಾಗಿ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದುದನ್ನು ವರ್ಣಿಸುವ ಅನೇಕ ಪದ್ಯಗಳನ್ನು ಋಗ್ವೇದದಲ್ಲಿ ಕಾಣಬಹುದು.

ರಾಮಾಯಣ ಹಾಗೂ ಮಹಾಭಾರತದಂತಹ ಮಹಾಕಾವ್ಯಗಳು ಆರ್ಯನ್ನೇತರ ಕಾಲದಲ್ಲಿ ಮಹಿಳೆಯರಿಗೆ ಇದ್ದ ಸ್ಥಾನಮಾನಗಳನ್ನು ಕುರಿತು ವಿವರಗಳನ್ನು ತಿಳಿಸುತ್ತದೆ. ಆರ್ಯನ್ನರಿಗಿಂತಲೂ ಹಿಂದೆ ಮಹಿಳೆಯರು ವೈವಾಹಿಕ ವಿಷಯಗಳಲ್ಲಿ ಸಾಕಷ್ಟು ಸ್ವಾತಂತ್ರ್ಯವನ್ನು ಹೊಂದಿದ್ದರು. ಮಾತ್ರವಲ್ಲ ಅವರ ಸ್ವಾತಂತ್ರ್ಯ ಇಂಡೋ–ಆರ್ಯನ್ನರ ಸಹೋದರಿಯರಿಗಿಂತಲೂ ಉತ್ತಮವಾಗಿತ್ತು. ಅವರಿಗೆ ಇಂಡೋ–ಆರ್ಯನ್ ಸಮಾಜದಲ್ಲಿದ್ದ ಪಾತಿವ್ರತ್ಯ, ಸತಿ, ಬಾಲ್ಯವಿವಾಹ, ವಿಧವಾಸ್ಥಿತಿ ಇತ್ಯಾದಿಗಳಾವುವು ಅವರನ್ನು ಬಾಧಿಸಿರಲಿಲ್ಲ. ಪರದಾ ಪದ್ಧತಿಯಂತಹ ಸಾಮಾಜಿಕ ಸಮಸ್ಯೆಗಳು ಆ ಕಾಲಘಟ್ಟದಲ್ಲಿ ಮಹಿಳೆಯರಿಗೆ ಕಾಡದಿರುವುದನ್ನು ಕಾಣಬಹುದಾಗಿದೆ.

ವೇದಕಾಲದ ಆರಂಭದ ದಿನಗಳಲ್ಲಿ ಮಹಿಳೆಯರಿಗೆ ವಿಶೇಷವಾದ ಗೌರವ ಇತ್ತು. ಆ ಸಂದರ್ಭದಲ್ಲಿ ಬಾಲ್ಯವಿವಾಹದಂತಹ ಪಿಡುಗು ಅಸ್ತಿತ್ವದಲ್ಲಿರಲಿಲ್ಲ. ಅದಲ್ಲದೆ ಮದುವೆಯಾಗಿದ್ದಂತಹ ಮಹಿಳೆಯರ ಗಂಡನು ಆಕಸ್ಮಿಕವಾಗಿ ಗತಿಸಿದರೆ ಮಹಿಳೆಯು ಪೂರ್ಣ ಕಾಲದವರೆಗೂ ವಿಧವೆಯಾಗಿ ಉಳಿಯುತ್ತಿರಲಿಲ್ಲ.

ಬದಲಾಗಿ ಅದೇ ಕುಟುಂಬಕ್ಕೆ ಸೇರಿದ ಗಂಡನ ಸಹೋದರನು ವಿವಾಹ ಮಾಡಿಕೊಳ್ಳುವ ವ್ಯವಸ್ಥೆಯಿತ್ತು. ಇದರಿಂದ ಕುಟುಂಬದ ಜನಸಂಖ್ಯೆಯು ಹೆಚ್ಚುವಲ್ಲಿ ಇದು ಪ್ರಮುಖ ಕಾರಣವಾಗಿತ್ತು ಎಂಬುದು ಋಗ್ವೇದದಲ್ಲಿ ದಾಖಲಾಗಿರುವುದನ್ನು ಗಮನಿಸಬಹುದು. ಈ

ಕಾಲದಲ್ಲಿ ಪುರುಷಪ್ರಧಾನ ವ್ಯವಸ್ಥೆ ಇದ್ದರೂ ಮಹಿಳೆಯರ ಸ್ಥಾನವು ಉತ್ತಮವಾಗಿತ್ತು.

ಸಮಾಜದಲ್ಲಿ ನಡೆಯುತ್ತಿದ್ದ ವಿಶೇಷ ಆಚರಣೆಗಳಾದ ಬೌದ್ಧಿಕ ಹಾಗೂ ಆಧ್ಯಾತ್ಮಿಕ ಸಂದರ್ಭಗಳಲ್ಲಿ ಪತಿ–ಪತ್ನಿಗಳಿಬ್ಬರೂ ಯಜ್ಞ–ಪೂಜೆಗಳನ್ನು ನಡೆಸುತ್ತಿದ್ದರು. ಅಲ್ಲದೆ ದೇವತೆಗಳಿಗೆ ಹವಿಸ್ಸನ್ನು ಅರ್ಪಿಸುವ ಪರಿಪಾಠ ಇದ್ದುದು ಕಂಡುಬರುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ ಋಗ್ವದದ ಹಲವು ಸ್ತೋತ್ರಗಳು ಮಹಿಳೆಯರಿಂದ ರಚಿತವಾಗಿರುವುದೆಂಬ ಅಂಶವು ಅವರಿಗಿದ್ದ ಸ್ಥಾನಮಾನವನ್ನು ದೃಢಪಡಿಸುತ್ತದೆ. ವಿಶ್ವಾವರ, ಅಪಲ, ಲೋಪಮುದ್ರಾ, ಶಶಿಯಶಿ, ಘೋಷಾ, ಇಂದ್ರಾಣಿ ಮತ್ತು ಸಚಿ ಮೊದಲಾದವರು ಸ್ತೋತ್ರಗಳನ್ನು ರಚಿಸಿರುವರೆಂದು ಹೆಸರಿಸಲಾಗಿದೆ. ಒಟ್ಟಿನಲ್ಲಿ ಧಾರ್ಮಿಕ ಸ್ತೋತ್ರಗಳನ್ನು ರಚಿಸಲು ಮಹಿಳೆಯರು ಸಮರ್ಥರು ಎಂದು ಪರಿಗಣಿಸಲಾದ ಅಂಶವೇ ಅಂದಿನ ದಿನಗಳಲ್ಲಿ ಮಹಿಳೆಯರಿಗಿದ್ದ ಧಾರ್ಮಿಕ ಅಸಮತೆಗಳು ಕಡಿಮೆ ಎಂಬುದಕ್ಕೆ ಸಾಕ್ಷಿಯೆನಿಸುತ್ತವೆ.

ವೇದಗಳ ಅಂತ್ಯಕಾಲದಲ್ಲಿ ಸ್ತ್ರೀಯರ ಸ್ಥಾನಮಾನದಲ್ಲಿ ಇಳಿಮುಖ ಕಂಡಿತು. ತಂದೆ ತಾಯಿಯರ ಸದ್ಗತಿಯು ಗಂಡು ಮಕ್ಕಳಿಂದ ಮಾತ್ರ ಸಾಧ್ಯ. ಹೆಣ್ಣು ಮಕ್ಕಳು ಪಾರಮಾರ್ಥಿಕ ಕಾರ್ಯವನ್ನು ಮಾಡಲು ಅಸಮರ್ಥರು ಎಂಬ ಭಾವನೆ ಬೇರೂರಿತ್ತು. ಹಾಗಾಗಿ ಅದುವರೆವಿಗೂ ಹೆಣ್ಣು ಮಕ್ಕಳ ಬಗೆಗೆ ಇದ್ದ ದೃಷ್ಟಿಕೋನಗಳು ಬದಲಾದವು. ಗಂಡು ಮಕ್ಕಳು ಶ್ರೇಷ್ಠವೆಂದು ಭಾವಿಸಿ, ಅವರ ಹುಟ್ಟಿಗೆ ಸ್ತ್ರೀಯರು ಹೆರುವ ಸಾಧನ ಎಂಬ ಅಭಿಪ್ರಾಯವಿತ್ತು. ಋಗ್ವೇದದ ಅನಂತರದ ಕಾಲಘಟ್ಟದಲ್ಲಿ ರಚನೆಯಾದ ಅಥರ್ವವೇದ ಬ್ರಾಹ್ಮಣಕಗಳು ಮತ್ತು ಉಪನಿಷತ್ತುಗಳಲ್ಲಿ ಇಂತಹ ಭಾವನೆಗಳನ್ನು ವ್ಯಕ್ತಪಡಿಸಿರುವುದನ್ನು ಉಲ್ಲೇಖಿಸಬಹುದು.

ಮೃತರಾದ ತಂದೆ ತಾಯಿಗಳಿಗೆ ಮಹಿಳೆಯರಿಂದ ಯಾವುದೇ ಸದ್ಗತಿ ದೊರೆಯುವುದಿಲ್ಲವೆಂಬ ಭಾವನೆ ಬಂದ ನಂತರದ ದಿನಗಳಲ್ಲಿ ಅವರ ಬಗೆಗೆ ಸಮಾಜದ ಧೋರಣೆಗಳು ಬದಲಾದವು. ಹಾಗಾಗಿ ಪಿತೃಪ್ರಧಾನ ಸಮಾಜದಲ್ಲಿ ಕ್ರಮೇಣ ಗಂಡು ಮಕ್ಕಳಿಗೆ ಹೆಚ್ಚಿನ ಪ್ರಾಶಸ್ತ್ಯ ದೊರಕಿತು. ಆದ್ದರಿಂದ ಆಧ್ಯಾತ್ಮಿಕ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಲು ಅಶುದ್ಧರಾದ ಮಹಿಳೆಯರಿಗೆ ಅರ್ಹತೆಯಿರುವುದಿಲ್ಲವೆಂಬ ಅಭಿಪ್ರಾಯ ಬಲವಾಗತೊಡಗಿತು. ಇಂತಹ ಪಾರಮಾರ್ಥಿಕವಾದ ಭಾವನೆಗಳಿಂದ ಪುರುಷರಿಗೆ ಹೆಚ್ಚಿನ ಪ್ರಾಮುಖ್ಯತೆ ದೊರೆಯಿತು. ಪರಿಣಾಮವಾಗಿ ಸ್ತ್ರೀಯರು ಸಮಾಜದಲ್ಲಿ ಅವಕೃಪೆಗೆ ಒಳಗಾದರು ಎಂಬ ಅಭಿಪ್ರಾಯವಿದೆ. ಆದರೆ ಸುಶಿಕ್ಷಿತರಾದ ಮಹಿಳೆಯರ ಬಗೆಗೆ ವಿಶೇಷ ಗೌರವ ಇತ್ತು. ಪ್ರಸಿದ್ಧ ಬ್ರಹ್ಮವಾದಿನಿಯೆನಿಸಿದ ಗಾರ್ಗಿವಾಚಕ್ಕವಿಯು, ಮಹಾಜ್ಞಾನಿಯಾದ ಯಾಜ್ಞವಲ್ಕನೊಂದಿಗೆ ನಡೆಸಿದ ಆಧ್ಯಾತ್ಮಿಕ ವಿಷಯದ ಚರ್ಚೆಯಲ್ಲಿ ಭಾಗವಹಿಸಿದಳೆಂಬ ಉಲ್ಲೇಖ ಬೃಹದಾರಣ್ಯ ಉಪನಿಷತ್ತಿನಲ್ಲಿ ದಾಖಲಿಸಲಾಗಿದೆ. ಉಪನಿಷತ್ ಕಾಲದಲ್ಲಿ ಮಹಿಳೆಯರು ವೇದಗಳನ್ನು ಪಠನ ಮಾಡುತ್ತಿದ್ದರು. ಅಲ್ಲದೆ ಆ ಸಂದರ್ಭದಲ್ಲಿ ಜ್ಞಾನಿಗಳಾದ ಋಷಿಗಳು ತಮ್ಮ ಪತ್ನಿಯರಿಗೆ ಪವಿತ್ರ ಶಾಸ್ತ್ರಗ್ರಂಥಗಳನ್ನು ಬೋಧಿಸುತ್ತಿದ್ದರು. ಹಾಗಾಗಿ ಕ್ರಮೇಣ ಮಹಿಳೆಯರಿಗೆ ಇದ್ದಂತಹ ಅಧ್ಯಯನದ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲಾಯಿತೆಂದು ಉಪನಿಷತ್ತು ಉಲ್ಲೇಖಿಸುತ್ತದೆ.

ಕ್ರಿ.ಪೂ. ಆರನೆಯ ಶತಮಾನದ ವೇಳೆಗೆ ಅವತರಿಸಿದ ಬೌದ್ಧಧರ್ಮವು ಹಿಂದೂ ಧರ್ಮ ಹಾಗೂ ಪೌರೋಹಿತ್ಯಕ್ಕೆ ಭಿನ್ನವಾದ ವಾತಾವರಣವನ್ನು ಸೃಜಿಸಿತು. ವೇದಗಳ ಕಾಲದಲ್ಲಿ ಪುರುಷನ ಮೋಕ್ಷ ಸಾಧನೆಗೆ ಗಂಡು ಮಗು ಅನಿವಾರ್ಯ ಎಂಬ ವಾದವನ್ನು ಬುದ್ಧನು ತಿರಸ್ಕರಿಸಿದನು. ವಿವಾಹವಾಗಿ ಸಂತತಿಯನ್ನು ವೃದ್ಧಿ ಮಾಡುವುದು ಮುಖ್ಯವಲ್ಲ; ಬದಲಿಗೆ ಬ್ರಹ್ಮಚರ್ಯೆ

ಮತ್ತು ಇಂದ್ರಿಯ ನಿಗ್ರಹವೇ ಪ್ರಮುಖವಾದುದು ಎಂಬ ಸಂದೇಶವನ್ನು ಬುದ್ಧ ಸಾರಿದನು. ಈ ಹೇಳಿಕೆಯು ಭಾರತ ದೇಶದಲ್ಲಿ ಬೌದ್ಧಧರ್ಮ ಅಸ್ತಿತ್ವದಲ್ಲಿದ್ದ ಕಾಲದಲ್ಲಿ ಮಹಿಳೆಯರಿಗೆ ಇದ್ದ ವೈಯಕ್ತಿಕ ಹಕ್ಕುಗಳನ್ನು ಬೆಂಬಲಿಸಿತು. ಮಾತ್ರವಲ್ಲ ಮಹಿಳೆಯರಿಗೆ ಉತ್ತಮ ವಾತಾವರಣವನ್ನು ಕಲ್ಪಿಸಿತು.

ಪುರಾಣ ಮತ್ತು ಧರ್ಮಶಾಸ್ತ್ರಗಳ ಅವಧಿಯಲ್ಲಿ 'ಮನು'ವಿನ ಅಭಿಪ್ರಾಯವು ಬುದ್ಧನ ಹೇಳಿಕೆಗಿಂತ ಭಿನ್ನವಾದ ಹೇಳಿಕೆಯಾಗಿತ್ತು. ವಿವಾಹದಲ್ಲಿ ಒಬ್ಬ ಪುರುಷನು ಬೌದ್ಧಿಕ ಹಾಗೂ ಆಧ್ಯಾತ್ಮಿಕ ಅರ್ಹತೆಯನ್ನು ಅವಲಂಬಿಸಿದ್ದರೆ, ಒಬ್ಬ ಹುಡುಗಿಯ ಅರ್ಹತೆಯನ್ನು ಆಕೆಯ ಸೌಂದರ್ಯದ ಮೇಲೆ ನಿರ್ಧರಿಸಬೇಕು. ಅವಳಿಗೆ ಶಾರೀರಿಕ ದೋಷಗಳಿರಬಾರದು. ಸುಂದರ ಹೆಸರು, ಆನೆಯ ನಡಿಗೆ, ತಲೆಯಲ್ಲಿ ಸಣ್ಣಪ್ರಮಾಣದ ಕೂದಲು, ಮೃದು ಕೈಕಾಲುಗಳಿರಬೇಕು ಎಂದು ಹೇಳುವ ಮೂಲಕ ಮನುವು ಹೆಣ್ಣಿನ ಆಂತರಿಕ ಸೌಂದಯ್ಯಕ್ಕಿಂತ ಬಾಹ್ಯ ಸೌಂದಯ್ಯಕ್ಕೆ ಹೆಚ್ಚಿನ ಒತ್ತು ನೀಡಿದನು.

'ದಕ್ಷ' ಎನ್ನುವ ನ್ಯಾಯ ರಚನಕಾರನ ಪ್ರಕಾರ ಒಬ್ಬ ಒಳ್ಳೆಯ ಪತ್ನಿಯು ಹುಟ್ಟಿನಿಂದಲೇ ಆಗಿರುವುದಿಲ್ಲ. ಆಕೆಯನ್ನು ರೂಪಿಸಬೇಕಾಗುತ್ತದೆ. ಅವಳ ಸ್ಥಾನದ ಅರಿವು ಮಾಡಿಕೊಡುತ್ತಿರಬೇಕು. ಅವಳು ಪುರುಷನ ಆಗ್ರಹವನ್ನು ಮೀರಬಾರದು' ಎಂದೆಲ್ಲಾ ಹೇಳುವ ಮೂಲಕ ಅವಳನ್ನು ಜಿಗಣೆಗೆ ಹೋಲಿಸುತ್ತಾನೆ. 'ಅತ್ರಿ' ಎಂಬ ಮತ್ತೊಬ್ಬ ನ್ಯಾಯ ರಚನಕಾರನು ಒಬ್ಬ ಬಂಜೆ ಹೆಣ್ಣಿನ ಮನೆಯಲ್ಲಿ ಆಕೆಯು ತನ್ನ ಸ್ವಂತ ಮಗಳಾಗಿದ್ದರೂ ಸಹ ಒಬ್ಬ ಪುರುಷನಿಂದ ಆಹಾರವನ್ನು ಸ್ವೀಕರಿಸುವುದು ಉಚಿತವಲ್ಲ ಎಂದು ಅಭಿಪ್ರಾಯ ಪಡುತ್ತಾನೆ.

ಈ ಎಲ್ಲಾ ಹೇಳಿಕೆಗಳು ಅಂದಿನ ಕಾಲದಲ್ಲಿ ಮಹಿಳೆಯರಿಗೆ ಇದ್ದ ದುರ್ಗಮ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಡುತ್ತವೆ. ಪುರುಷರಂತೆಯೇ ಮಹಿಳೆಗೂ ಒಂದು ಅಸ್ತಿತ್ವವಿದೆ. ಎಂಬುದರ ಅರಿವಿಲ್ಲದ ಈ ಹೇಳಿಕೆಯು ಸಮಾಜದಲ್ಲಿ ಅಸಮಾನತೆಯನ್ನು ಎತ್ತಿ ಹಿಡಿಯುವ ಹುನ್ನಾರವಿದ್ದಂತೆ ಕಂಡುಬರುತ್ತದೆ.

ಹಾಗಾಗಿ ವೇದಗಳ ಕಾಲದಲ್ಲಿ ಮಹಿಳೆಯರಿಗೆ ಉನ್ನತ ಸ್ಥಾನಮಾನವಿತ್ತು. ಅದು ಬದಲಾಯಿತು. ಬುದ್ಧನ ಕಾಲಘಟ್ಟದಲ್ಲಿ ಮಹಿಳೆಯರನ್ನು ಅಲ್ಲಗಳೆಯದೆ ಉತ್ತಮ ವಾತಾವರಣವಿದ್ದರೂ, ಮುಂದಿನ ದಿನಗಳಲ್ಲಿ ಮಹಿಳೆಯ ಬಗೆಗಿನ ಧೋರಣೆ ಬೇರೊಂದು ರೂಪವನ್ನೆ ಪಡೆದುಕೊಂಡಿತು. ಅಂದು ಮಹಿಳೆಯನ್ನು ಕುರಿತ ಈ ಅಭಿಪ್ರಾಯವೇ ಪ್ರಸ್ತುತ ದಿನಮಾನಗಳಲ್ಲಿಯೂ ನಲೆಯೂರಲು ಆ ಮನುವಿನ ಧೋರಣೆಯೇ ಮುಂದುವರಿಯುತ್ತಿರುವುದು ವಿಪರ್ಯಾಸವೇ ಸರಿ.

**ಪರಾಮರ್ಶನ ಗ್ರಂಥಗಳು**


- Altekar, A. S. (1962). *The position of women in Hindu civilization: From prehistoric times to the present day* (3rd ed.). Motilal Banarsidass.
- Bhattacharji, S. (1994). *Women and society in ancient India.* Basumati Corporation.
- Indra. (1955). *The status of women in ancient India: A vivid and graphic survey of women's position, social, religious, political, and legal, in India (2nd ed.).* Motilal Banarsidass.
- Jain, S. (2003). *Encyclopaedia of Indian women through the ages: Ancient India.* Gyan Publishing House.
- Kumbhare, A. R. (2009). *Women of India: Their status since the Vedic times. Universe*.
- Mandal, G. C. (2025). The rights and status of women in ancient India: Insights from Hindu legal literature. *Journal of the Asiatic Society of*

*Bangladesh, Humanities*, 70(1), 1–35. https://doi.org/10.3329/jasbh.v70i1.82652

- Pal, B. (2019). The saga of women's status in ancient Indian civilization. *Miscellanea Geographica*, 23(3), 1–10.
- Sharma, T. (1987). *Women in ancient India*. Ess Ess Publications.
- Vishnoi, S. (1987). *Economic status of women in ancient India*. Kusumanjali Prakasha